## ಮೈಸೂರು ರೆವಿನ್ಯೂ ಸರ್ವೆ ಮತ್ತು ಸೆಟಲ್‌ಮೆಂಟ್ ಇಲಾಖೆ.

ನಂಬರು 332. ತಾರೀಖು 9ನೇ ಆಗಸ್ಟು 1884.

ಸಕಲಜನಗಳಿಗೂ ತಿಳಿಯುವ ಬಗ್ಗೆ ಯಿದರಿಂದ ಪ್ರಕಟಿಸಲ್ಪಡುವದೇನಂದರೆ, 1884ನೇ ಇಸವಿ ನವಂಬರ್ 1ನೇ ಮುಕ್ತಂ ಆಗಾಯಿತು ಪ್ರಾರಂಭಿಸುವ ಸರ್ವೆ ಕೆಲಸದ ಕಾಲದಲ್ಲಿ ಇದರಡಿ ನಮೂದಿಸುವ ತಾಲ್ಲೂಕುಗಳಲ್ಲಿ ಮೆಜರಿಂಗ್ ಯಾನೆ ಮೋಜಣಿ, ಕ್ಲಾಸಿಫಿಕೇಷ್ಯ ಯಾನೆ ಪ್ರತಿಬಂದಿ ಮತ್ತು ಸೆಟಲ್‌ಮೆಂಟ್ ಯಾನೆ ತರಂ ಫೈಸಲ್ ಕೆಲಸಗಳು ನಡಿಸಲ್ಪಡುವವು.

| ಡಿಸ್ಟ್ರಿಕ್ಟು | ತಾಲ್ಲೂಕು | ಕೆಲಸ ಪುರು ಆಗತಕ್ಕ ಷುಮಾರ್ ತಾರೀಖು. |
|---|---|---|
| | **ಮೋಜಣಿಯು.** | |
| ಕೋಲಾರ | ಬವರಿಂಗ್‌ಪೇಟೆ | 5ನೇ ನವಂಬರ್ 1884. |
| ಕೋಲಾರ | ಕೋಲಾರ | ಡಿಟೋ |
| ಮೈಸೂರು | ನಾಗಮಂಗಲ್ | ಡಿಟೋ |
| ,, | ಮೈಸೂರು | ಡಿಟೋ |
| ,, | ಶ್ರೀರಂಗಪಟ್ಣ | ಡಿಟೋ |
| ,, | ಮಂಡ್ಯ | 1ನೇ ಫಿಬ್ರವರೀ 1885. |
| | **ಪ್ರತಿಬಂದಿಯು.** | |
| ಕೋಲಾರ | ಮುಳಬಾಗಲ್ | 5ನೇ ನವಂಬರ 1884. |
| ,, | ಚಿಂತಾಮಣಿ | |
| ಮೈಸೂರು | ಅತ್ತಿಕುಪ್ಪಾ | ಡಿಟೋ |
| ಬೆಂಗಳೂರು | ಸೊಸಕೋಟೆ | 1ನೇ ಮೇ 1885. |
| | **ತರಂಫೈಸಲ್.** | |
| ಮೈಸೂರು | ಚನ್ನರಾಯಪಟ್ಣ | ಫಿಬ್ರವರೀ 1885. |
| ,, | ಎಡತೊರೆ (ಸರ್ವೆ ಜಮಾಬಂದಿಯು ಲಗಾವು ಆಗದೆಉಳ್ದ ಭಾಗವು) | ಮಾರ್ಚೀ 1885. |
| ,, | ಹೊಳೇನರಸೀಪುರ (ಎಡತೊರೆ ತಾಲ್ಲೂಕಿನಿಂದ ವರ್ಗವಾಗಿ ಬಂದ ಗ್ರಾಮಗಳು) | |
| ಕೋಲಾರ | ಬಾಗೇಪಲ್ಲಿ | ಏಪ್ರೀಲ್ 1885. |
| ,, | ಶಿಡ್ಲಘಟ್ಟಾ | ಮೇ 1885. |
| ಬೆಂಗಳೂರು | ಬೆಂಗಳೂರು * | |
| ,, | ದೊಡ್ಡಬಳ್ಳಾಪುರ * | |
| ,, | ನೆಲಮಂಗಲ * | ಜೂನ್ 1885. |
| ಕೋಲಾರ | ಚಿಕ್ಕಬಳ್ಳಾಪುರ * | |

* ಇವುಗಳು ಲೇಟ್ ದೇವನಹಳ್ಳಿ ತಾಲ್ಲೂಕಿನ ಗ್ರಾಮಗಳಿಗೆ ಅನ್ವಯಿಸುತ್ತವೆ.

ಟೀಪು—ಸೆಟ್ಲಾದ, ಯಾನೆ ತರಂ ಫೈಸಲಾದ, ಕಾಫಿ ಡಿಸ್ಟ್ರಿಕ್ಟುಗಳಲ್ಲಿ ಚಿಲ್ಲರೆ ಕೆಲಸವು ಕೂಡಾ ಚಲಾಯಿಸಲ್ಪಡುವದು.

ಜೆ. ಪಿ. ಗ್ರಾಂಟ್,
ಸೂ॥ ರೆ॥ ಸರ್ವೆ ಮತ್ತು ಸೆಟಲ್‌ಮೆಂಟ್, ಮೈಸೂರು.